ವಾಗಿ ಅಗತ್ಯವೆನಿಸಿದಾಗ ಚಿತ್ರದ — ಭಾಗದಷ್ಟನ್ನು ಮಾತ್ರ ಪೂರ್ಣ ಭಾವಿ ಅನುಮತಿ ಪಡೆದು ರಾಜ್ಯದ ಹೊರಗಡೆ ಚಿತ್ರೀಕರಿಸಲು ಅವಕಾಶವಿದೆ. ಹಾಗೂ ರಾಜ್ಯದ ಹೊರಗಡೆ ಸಂಸ್ಕರಣಗೊಂಡ ವರ್ಣ ಚಲನ ಚಿತ್ರಗಳಿಗೆ ರೂ. ೨೫,೦೦೦-೦೦ ಕಡಿಮೆ ಮಾಡಿ ಸಹಾಯ ಧನವನ್ನು ನೀಡಲಾಗುತ್ತಿದೆ.

ಶ್ರೀ ಜೀವರಾಜ ಆಳ್ವ.— ಇದರಲ್ಲಿ (ಈ) ಪ್ರಶ್ನೆಗೆ ಉತ್ತರದಲ್ಲಿ ಸ್ವಲ್ಪ ವ್ಯತ್ಯಾಸ ಇದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜ್ಜೆಟ್ ಭಾಷಣದಲ್ಲಿ ರಾಜ್ಯದಲ್ಲಿ ತಯಾರಾದ ಚಿತ್ರಗಳಿಗೆ ಮಾತ್ರ ಸಹಾಯ ಧನವನ್ನು ೧.೫ ಲಕ್ಷ ಮತ್ತು ೨.೫ ಲಕ್ಷ ರೂಪಾಯಿ ಹೆಚ್ಚಿಸಲಾಗಿದ್ದು ಇದು ೧-೧-೬೬ರಿಂದ ಜಾರಿಗೆ ಬರುತ್ತದೆ ಎಂದೂ ಹೇಳಿದ್ದಾರೆ. ಅಂತೆಯೇ, ಕಲಾತ್ಮಕ ಚಿತ್ರಗಳಿಗೆ ೩ಲಕ್ಷ ರೂಪಾಯಿ ಹೆಚ್ಚಿನ ಸಹಾಯ ಧನ ನೀಡುವುದಾಗಿ ಹೇಳಿದ್ದಾರೆ. ರಾಜ್ಯದ ಹೊರಗೆ ತಯಾರಿಸಲಾದ ಕನ್ನಡ ಚಿತ್ರಗಳಿಗೆ ತೆರಿಗೆ ವಿನಾಯಿತಿ ನೀಡುವ ಅವಧಿಯನ್ನು ಇನ್ನು ಆರುತಿಂಗಳು ಕಾಲ ಮಾತ್ರ ಮುಂದುವರೆಸಲಾಗುವುದು. ೧೯೬೭ರಿಂದ ರಾಜ್ಯದ ಹೊರಗೆ ತಯಾರಾದ ಕನ್ನಡ ಚಿತ್ರಗಳಿಗೆ ಈ ೫೦ಪರ್ಸೆಂಟ್ ತೆರಿಗೆ ವಿನಾಯಿತಿ ಇರುವುದಿಲ್ಲ. ಸರ್ಕಾರದ ನೀತಿಯೇನು ಎಂದು ಕೇಳಿರುವ ಮಾನ್ಯ ಸದಸ್ಯರ (ಈ) ಪ್ರಶ್ನೆಗೆ ಇದು ಉತ್ತರವಾಗಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.— ಕಡ್ಡಾಯ ಚಲನಚಿತ್ರ ಪ್ರದರ್ಶನಕ್ಕೆ ಚಲನಚಿತ್ರ ಮಂದಿರಗಳ ಮಾಲೀಕರು ತಂದಿರುವ ತಡೆಯಾಜ್ಞೆ ಬಂದು ಎಷ್ಟು ದಿವಸವಾಯಿತು ? ಇದನ್ನು ತೆರವು ಮಾಡಿಸಲು ಪ್ರಯತ್ನ ಮಾಡಿಲ್ಲವೆ ?

ಶ್ರೀ ಜೀವರಾಜ ಆಳ್ವ.— ತಡೆಯಾಜ್ಞೆ ತೆರವು ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಇದರಿ ಅನ್ವಯವಾಗುವುದು ಬೆಂಗಳೂರು ನಗರದ ಚಿತ್ರಮಂದಿರಗಳಿಗೆ ಮಾತ್ರ. ಉಳಿದ ಎಲ್ಲಾ ಜಿಲ್ಲಾಕೇಂದ್ರ ಗಳಲ್ಲೂ ಕೂಡ ಇದನ್ನು ಒಪ್ಪಿಕೊಂಡಿದ್ದು ಅದರಂತೆ ಕಡ್ಡಾಯ ಕನ್ನಡ ಚಲನಚಿತ್ರಗಳ ಪ್ರದರ್ಶನ ನಡೆಯುತ್ತಿದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ:
ರಾಜ್ಯದಲ್ಲಿರುವ ರಕ್ತ ಶೇಖರಣಾ ಸಂಸ್ಥೆಗಳು

೨೯೦. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

೧. ರಾಜ್ಯದಲ್ಲಿ ನೊಂದಣಿ ಪಡೆದ ಖಾಸಗಿ ಹಾಗೂ ಸರ್ಕಾರಿ ಸ್ವಾಮಿತ್ವದ ಮಾನವೀಯ ರಕ್ತ ಶೇಖರಣಾ ಸಂಸ್ಥೆಗಳ ಸಂಖ್ಯೆ ಎಷ್ಟು ?

೨. ರಾಜ್ಯದಲ್ಲಿ ದಿನನಿತ್ಯ ಶೇಕರಣೆ ಮಾಡಲಾಗುತ್ತಿರುವ ರಕ್ತದ ಪ್ರಮಾಣ ಎಷ್ಟು ? ಮತ್ತು ಅದರಿಂದ ಜನರಿಗೆ ಕೊಡತಕ್ಕ ಪ್ರತಿ ೩೦೦ ಎಂಎಲ್ ರಕ್ತದ ದರವೇನು ?

೩. ರಕ್ತವನ್ನು ಶೇಖರಣೆ ಮಾಡುತ್ತಿರುವ ಖಾಸಗಿ ಸಂಸ್ಥೆಗಳಾಗಲಿ ಅಥವಾ ಸರ್ಕಾರ ಸಂಸ್ಥೆ ಗಳಾಗಲಿ ರಾಜ್ಯದ ಕಾಯಿದೆ ಕಾನೂನಿನ ಉಲ್ಲಂಘನೆ ಮಾಡಿ ರಕ್ತ ಶೇಖರಣೆ ಮಾಡುತ್ತಿದುದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೪. ಹಾಗಿದ್ದಲ್ಲಿ ಅಂಥಹ ಸಂಸ್ಥೆಗಳ ವಿರುದ್ಧ ಇಲ್ಲಿಯವರೆಗೆ ದಾಖಲು ಮಾಡಿರುವ ಮೊಕದ್ದಮೆಂ ಗಳ ಸಂಖ್ಯೆ ಎಷ್ಟು ?

೫. ೧೮ ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಂದ ಶೇಖರಣೆ ಮಾಡಿದ ರಕ್ತಕ್ಕೆ ಕೊಡತಕ್ಕ ಅನು ದಾನವನ್ನು ವಿದ್ಯಾರ್ಥಿ ವೃಂದದ ಅಭಿವೃದ್ಧಿ ನಿಧಿಯಿಂದ ಸ್ಥಾಪನೆ ಮಾಡುವುದಕ್ಕಾಗಿ ಸರ್ಕಾರದವರು ಏನಾದರೂ ಯೋಜನೆಯನ್ನು ಹಾಕಿಕೊಂಡಿದ್ದಾರೆಯೇ ?

೬. ಪ್ರತಿ ಜಿಲ್ಲೆಯಲ್ಲಿ ಸರ್ಕಾರಿ ಸ್ವಾಮಿತ್ವದ ಸುಸಜ್ಜಿತ ಶೇಖರಣ ಘಟಕವನ್ನು ಸ್ಥಾಪಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಪ್ರಶ್ನೆಗಳಿಗೆ ಉತ್ತರಿಸುವರು).—

೧. ೩೩ ಸರ್ಕಾರಿ ರಕ್ತ ಶೇಕರಣಾ ಸಂಸ್ಥೆಗಳು, ೧೯ ಸರಕಾರೇತರ.—ಇವುಗಳಲ್ಲಿ ೧೩ ಖಾಸಗಿ ಸಂಸ್ಥೆಗಳಿದ್ದು ಇನ್ನುಳಿದ ೬ ಸ್ವಯಂಪ್ರೇರಿತ ಸಂಸ್ಥೆಗಳಾಗಿರುತ್ತವೆ.

೨. ಎ) ಸರ್ಕಾರದ ವತಿಯಿಂದ ದಿನಕ್ಕೆ ೬೦ ಸೀಸೆಗಳನ್ನು ಶೇಖರಿಸುತ್ತಿದ್ದು ಅದರ ಮಾರುವ ದರ ಪ್ರತಿ ಶೀಸೆಗೆ ರೂ. ೧೫ ಆಗಿರುತ್ತದೆ.

ಬಿ) ಖಾಸಗಿ ಸಂಸ್ಥೆಗಳಿಂದ ದಿನಕ್ಕೆ ಸುಮಾರು ೧೩೫ ಬಾಟಲ್ಲುಗಳು ಶೇಖರಣೆ ಆಗುತ್ತಿದ್ದು ಅದನ್ನು ಸೀಸೆಗೆ ೮೦ ರೂಪಾಯಿಗಳಂತೆ ಮಾರುತ್ತಾರೆ. ಅಪರೂಪ ಗುಂಪಿನ ರಕ್ತಗಳಿಗೆ ಇದು ಇನ್ನೂ ಹೆಚ್ಚಾಗಿರುತ್ತದೆ.

೩. ಇಲ್ಲ.

೪. ಉದ್ಭವಿಸುವುದಿಲ್ಲ.

೫. ಈವರೆವಿಗೂ ಈ ಪ್ರಸ್ತಾವನೆ ಇಲ್ಲ.

೬. ತರಬೇತಿ ಹೊಂದಿದ ಶುಶ್ರೂಷಕರು, ತಾಂತ್ರಿಕರು ಮತ್ತು "ಡಿ" ಗ್ರೂಪ್ ನೌಕರರೊಳಗೊಂಡು ರಾಸಾಯನಿಕ ವಸ್ತುಗಳೊಂದಿಗೆ ಮತ್ತು ಶೀತಲಯಂತ್ರ (ರಿಫ್ರಿಜರೇಟರ್)ಗಳನ್ನೊಳಗೊಂಡ ಉಗ್ರಾಣಗಳು ಹೊಂದಿದಕ್ಕಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ 'ರಕ್ತನಿಧಿ' ಸಂಸ್ಥೆಗಳು ಸ್ಥಾಪಿಸಲ್ಪಟ್ಟಿರುತ್ತವೆ.

ಗುರುನಾನಕ್ ಭವನವನ್ನು ನಿರ್ಮಿಸುವುದು

೧೮೪. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಪಾರ್ಶ್ವ ವಾರ್ತಾ ಯುವಜನ ಸೇವೆಗಳು, ಕ್ರೀಡೆಗಳು ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಗುರುನಾನಕ್ ಭವನ ಎಂಬ ಹೆಸರಿನ ಯಾವುದಾದರೂ ಕಟ್ಟಡವನ್ನು ಬೆಂಗಳೂರಿನಲ್ಲಿ ನಿರ್ಮಿಸಲಾಗಿದೆಯೇ ?

(ಆ) ಗುರುನಾನಕ್ ಭವನದ ಉದ್ದೇಶಗಳು ಇದರ ವ್ಯವಸ್ಥೆಯನ್ನು ನೋಡಿಕೊಳ್ಳುವ ಸಮಿತಿಯ ಹೆಸರು ಮತ್ತು ಸದರಿ ಸಮಿತಿಯ ಸದಸ್ಯರ ಹೆಸರುಗಳೇನು ?

(ಇ) ಕಟ್ಟಡ ಮೆಚ್ಚಿ

ಶ್ರೀ ಜೀವರಾಜಆಳ್ವ (ಪಾರ್ಶ್ವ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ರಾಜ್ಯ ಸಚಿವರು).

(ಅ) "ಗುರುನಾನಕ್ ಭವನ್" ಎಂಬ ಹೆಸರಿನ ಕಟ್ಟಡವನ್ನು ಬೆಂಗಳೂರಿನಲ್ಲಿ ನಿರ್ಮಿಸಲಾಗುತ್ತಿದೆ.

(ಆ) ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯೇತರ ಯುವಜನರಿಗೆ ಸೇವೆಯನ್ನು ನೀಡುವುದು ಮತ್ತು ಅವರ ಬಿಡುವಿನ ಸಮಯವನ್ನು ಉಪಯುಕ್ತ ಚಟುವಟಿಕೆಗಳಲ್ಲಿ ತೊಡಗಿಸಲು ಅವರಿಗೆ ಅವಕಾಶಗಳನ್ನು ಒದಗಿಸುವುದು ಈ ಯೋಜನೆಯ ಉದ್ದೇಶ. ಈ ಭವನವು ಯುವಜನರಲ್ಲಿ ಸ್ನೇಹಪ್ರಯತ್ನ ಮತ್ತು ಸ್ವಾವಲಂಬನೆಯ ಮನೋಭಾವವನ್ನು, ಬೆಳೆಸುವ ಮತ್ತು ವಿದ್ಯಾವಂತ ಜನಸಮುದಾಯದ ಸೇವೆಗೆ ವಿದ್ಯಾವಂತ ಜನಸಮುದಾಯವನ್ನು ತೊಡಗಿಸುವ ಹಾಗೂ ಕ್ರೀಡೆಗಳು ಮತ್ತು ಸಾಹಿತ್ಯ ಚಟುವಟಿಕೆಗಳನ್ನು ಉತ್ತೇಜಿಸುವ ಮತ್ತು ಸಂಘಟಿಸುವ ಗುರಿಯನ್ನು ಹೊಂದಿರುತ್ತದೆ. ಈ ಸಂಸ್ಥೆಯ ವ್ಯವಸ್ಥೆಯನ್ನು ಗುರುನಾನಕ್ ಭವನ್ ವ್ಯವಸ್ಥಾಪಕ ಸಮಿತಿಯು ನೋಡಿಕೊಳ್ಳುತ್ತಿದೆ. ಈ ಕೆಳಕಂಡ ಸದಸ್ಯರು ಇದರ ಪೋಲ್ವಿಚಾರಕರಾಗಿದ್ದಾರೆ.